ಕಾಡು, ಗುಡ್ಡ, ಬೆಟ್ಟ, ನದಿ, ತೊರೆ, ಆ ಕಾಲದ ಸಾಮಾಜಿಕ, ರಾಜಕೀಯ ಸ್ಥಿತ್ಯಂತರಗಳು, ಅಜ್ಜನ ಕತೆಗಳು, ಸಂಚಾರೀ ಕತೆಗಾರರು, ಅಪ್ಪನ ಸಮಾಜವಾದೀ ಗುಣಗಳು, ಕೂಲಿ ಕಾರ್ಮಿಕರುಗಳ ಬವಣೆಗಳು, ಕಾರ್ಮಿಕರ ಹೋರಾಟಗಳು, ಜನಪರ ಚಳವಳಿಗಳು, ಸರ್ವಾಧಿಕಾರಿಯೊಬ್ಬನ ಮೃಗೀಯ ವರ್ತನೆಗಳ ನೆರಳಲ್ಲಿ ಅರಳಿದ ಪುಟ್ಟ ಮನಸ್ಸೊಂದು ಮುಂದೆ ಬಲು ದೊಡ್ಡನಟ, ನಾಟಕಕಾರನಾದರೂ ಮನುಕುಲದ ಹಾಗೂ ಸಮ ಸಮಾಜದ ಕನಸು ಕಂಡ ಕಾರಣಕ್ಕೆ ದಾರಿಯೋ ಫೋನ ಈ ಆತ್ಮಕತೆ ಈ ಕಾಲಕ್ಕೂ ತುಂಬಾ ಮುಖ್ಯ ಅನಿಸುತ್ತದೆ. ಹಾಗೂ ಪ್ರಪಂಚದ ಅತ್ಯುತ್ತಮ ಆತ್ಮಕತೆಗಳ ಸಾಲಿಗೆ ಸೇರುತ್ತದೆ. ಅವನ 'ಮೈ ಫಸ್ಟ್ ಸೆವೆನ್ ಇಯರ್ಸ್ (ಪ್ಲಸ್ ಎ ಫ್ಯೂ ಮೋರ್)' ಆತ್ಮಕತೆಯ ಆಯ್ದ ಕೆಲವೇ ಕೆಲವು ಘಟನೆಗಳ ಹಾಗೂ ಸಂದರ್ಭಗಳ ಭಾವಾನುವಾದವನ್ನು ಇಲ್ಲಿ ಕೊಡಲಾಗಿದೆ.

★★★

'ನಾನೀಗ ಹೇಳ ಹೊರಟಿರುವುದು ನಟನಾಗಿ, ಲೇಖಕನಾಗಿ ಹಾಗೂ ನಿರ್ದೇಶಕನಾಗಿ ನನ್ನ ಬದುಕಿನ ಕಥೆಯನ್ನಲ್ಲ, ಬದಲಿಗೆ ನನ್ನ ಬಾಲ್ಯದ ಒಂದು ತುಣುಕನ್ನು. ಇನ್ನೂ ನಿಖರವಾಗಿ ಹೇಳುವುದಾದರೆ, ಇದು ನನ್ನ ಸಾಹಸದ ಮುನ್ನುಡಿಯ ಮುಂಚಿನ ಒಂದು ಭಾಗವಷ್ಟೇ... ನನಗೆ ನೆನಪಿದೆ, ಲೇಖಕ ಬ್ರೂನೋ ಬೆಟಲ್‌ಹೀಮ್ ಹೇಳುವಂತೆ, 'ನಾನು ಕೇಳೋದಿಷ್ಟೇ, ವ್ಯಕ್ತಿಯೊಬ್ಬನ ಬದುಕಿನ ಮೊದಲ ಏಳು ವರ್ಷಗಳನ್ನು ನನಗೆ ಕೊಡಿ. ಅಲ್ಲಿ ಎಲ್ಲವೂ ಇರುತ್ತದೆ. ಮಿಕ್ಕಿದ್ದನ್ನು ನೀವೇ ಇಟ್ಟುಕೊಳ್ಳಿ'.

'ನಾನು ಈ ಸ್ಕೋರನ್ನು ಕೊಂಚ ಮೀರಿದ್ದೇನೆ. ನಾನು ನಿಮಗೆ ನನ್ನ ಹತ್ತು ವರ್ಷಗಳನ್ನೂ, ಜೊತೆಗೆ ನನ್ನ ಪರಿಪಕ್ವತೆಯ ಕಡೆಗಿನ ಪಯಣದ ಮತ್ತೆ ಕೆಲವು ವರ್ಷಗಳನ್ನು ನಿಮಗಾಗಿ ನೀಡುತ್ತಿದ್ದೇನೆ... ಇದೇ ತುಂಬಾ ಜಾಸ್ತಿ!'

ಹೀಗೆ ಶುರುವಾಗುತ್ತದೆ ದಾರಿಯೋ ಫೋನ ಈ ವಿಶಿಷ್ಟ ಆತ್ಮಕಥನ. 1926ರಲ್ಲಿ ಇಟಲಿಯ ಮ್ಯಾಜ್ಯೋರೆ ಅನ್ನುವ ಸರೋವರದ ಅಂಚಿನಲ್ಲಿರುವ ಸ್ಯಾನ್‌ಜಿಯಾನೋ ಅನ್ನುವಲ್ಲಿ ರೈಲ್ವೇ ಸ್ಟೇಷನ್ ಮಾಸ್ಟರ್ ಮಗನಾಗಿ ಹುಟ್ಟಿದ ದಾರಿಯೋ ಫೋ, ಬೆಳೆದದ್ದು ಕಳ್ಳ ಸಾಗಾಣಿಕೆದಾರರು, ಜಾದುಗಾರರರು, ವಿಚಿತ್ರ ಕನಸುಗಾರರು ಹಾಗೂ ಸಂಚಾರಿ ಕಥೆಗಾರರು ತುಂಬಿದ್ದ ಪರಿಸರದಲ್ಲಿ. ಆದರೆ, ಅದು ಸರ್ವಾಧಿಕಾರಿ ಮುಸ್ಸಲೋನಿ ಪ್ರಚೋದಿತ ಫ್ಯಾಸಿಸ್ಟ್‌ಗಳು ಏಳ್ಗೆಯನ್ನು ಕಂಡುಕೊಳ್ಳುತ್ತಿದ್ದ ಕಾಲವೂ ಆಗಿತ್ತು. ಪ್ರಪಂಚದ ಎರಡನೇ ಮಹಾಯುದ್ಧವು ಸಮೀಪಿಸುತ್ತಿದ್ದಂತೆ, ಮುಂದೊಂದು ದಿನ ನಟನಾದ, ನಾಟಕಕಾರನಾದ ಹಾಗೂ ನೊಬೆಲ್ ಬಹುಮಾನ ಪುರಸ್ಕೃತನಾದ ದಾರಿಯೋ ಫೋ, ಆ ಹೊತ್ತಲ್ಲಿ ಪೂರಾ ತನ್ನದೇ ಆದ ವಿಶಿಷ್ಟ ದನಿಯೊಂದನ್ನು ಕಂಡುಕೊಳ್ಳತೊಡಗುತ್ತಾನೆ.

★★★

## ಆತ್ಮಕತೆಯ ಆಯ್ದಭಾಗಗಳು

### ಆ ಎರಡು ಮಾಯಾಲೋಕಗಳು

ಜ್ಞಾನಿಯೊಬ್ಬ ಹೇಳುವಂತೆ, ನೀನು ಎಲ್ಲಿ ಹುಟ್ಟಿದೆ ಅನ್ನುವುದರ ಮೇಲೆ ಸಕಲವೂ ಅವಲಂಬಿತವಾಗಿರುತ್ತದೆ.

